**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಡೂರು**

**ಸಿ.ಸಿ.2222/2022** **PW-1**

**ದಿಃ 03-10-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು :- ಶ್ರೀ ಸಿ.ಎನ್.ಸಿ ವಕೀಲರಿಂದ ಆರೋಪಿತರ ಪರ ವಕೀಲರುಃ-**

ನನ್ನ ಊರು ಜಿಗಣೆಹಳ್ಳಿ ಎಂದರೆ ಸರಿ. ಆರೋಪಿತರು ಸಹ ಜಿಗಣೆಹಳ್ಳಿ ವಾಸಿಗಳು ಎಂದರೆ ಸರಿ. ನಾನು ಮತ್ತು ಆರೋಪಿತರು ಎಲ್ಲಾ ಸಹ ಒಂದೇ ಜಾತಿಗೆ ಸೇರಿದವರು ಎಂದರೆ ಸರಿ. ನಮ್ಮನ್ನು ಊರಿನವರು ಬಹಿಷ್ಕಾರ ಹಾಕಿದ್ದು ಸದರಿ ವಿಚಾರವಾಗಿ ನಾನು ಚಿಕ್ಕಮಗಳೂರಿನ ಜಿಲ್ಲಾ ವರಿಷ್ಠಾಧಿಕಾರಿಗಳಿಗೆ ದೂರನ್ನು ನೀಡಿರುತ್ತೇನೆ ಎಂದರೆ ಸರಿ. ಜಿಲ್ಲಾ ವರಿಷ್ಠಾಧಿಕಾರಿಗಳು ತರೀಕೆರೆಯ ಡಿವೈಎಸ್.ಪಿರವರಿಗೆ ಸದರಿ ದೂರಿನ ವಿಚಾರವಾಗಿ ವರದಿಯನ್ನು ಸಲ್ಲಿಸಲು ತಿಳಿಸಿದ್ದರು ಎಂದರೆ ಸರಿ. ನಂತರ ತರೀಕೆರೆಯ ಡಿವೈಎಸ್.ಪಿರವರು ಹಾಗೂ ತಹಸಿಲ್ದಾರರವರು, ವೃತ್ತ ನಿರೀಕ್ಷಕರು ಮತ್ತು ಉಪ ನಿರೀಕ್ಷಕರುಗಳು ಸೇರಿ ತನಿಖೆ ನಡೆಸಿ ಗ್ರಾಮಸ್ಥರು ಯಾವುದೇ ಬಹಿಷ್ಕಾರ ಹಾಕಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ ಎಂದರೆ ಸರಿ. ನಂತರ ನಾನು ನ್ಯಾಯಾಲಯಕ್ಕೆ ಈ ಪಿರ್ಯಾದನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮನ್ನು ಬಹಿಷ್ಕಾರ ಹಾಕಿರುವ ಬಗ್ಗೆ ನಾನು ವೃತ್ತ ಪತ್ರಿಕೆಯಲ್ಲೂ ಸಹ ಪ್ರಕಟಣೆ ಮಾಡಿಸಿರುತ್ತೇನೆ. ಸದರಿ ವೃತ್ತ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ, ಬೇಕೆಂದರೆ ಹಾಜರುಪಡಿಸುತ್ತೇನೆ. ಸದರಿ ವಿಚಾರವನ್ನು ನಾನು ನನ್ನ ದೂರಿನಲ್ಲಿ ತಿಳಿಸಿರುವುದಿಲ್ಲ. ನಾನು ಊರಿನಲ್ಲಿ ಗಲಾಟೆ ಮಾಡಿಕೊಂಡು ಶಾಂತಿ ಭಂಗ ಉಂಟು ಮಾಡಿದ್ದರಿಂದ ಸಖರಾಯಪಟ್ಟಣ ಉಪ ನಿರೀಕ್ಷಕರು ನನ್ನ ವಿರುದ್ಧ ಸಿಆರ್.ಪಿ.ಸಿ ಕಲಂ.107 ರ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನು ಒಂದು ವರ್ಷಗಳ ಕಾಲ ಯಾವುದೇ ಗಲಾಟೆಯನ್ನು ಮಾಡುವುದಿಲ್ಲ ಎಂದು ತಹಸಿಲ್ದಾರರವರಿಗೆ ನಿಪಿ.2 ಮತ್ತು 3 ರಂತೆ ಮುಚ್ಚಳಿಕೆಯನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿ.

ನಾನು ಪಿರ್ಯಾದಿನಲ್ಲಿ ನಮ್ಮ ಮನೆಯ ಅಸೆಸ್ಮೆಂಟ್ ಸಂಖ್ಯೆ 145, ಖಾತಾ ನಂ.117 ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಸದರಿ ಸ್ವತ್ತು ನನಗೆ ಕ್ರಯದ ಮೂಲಕ ಬಂದಿದ್ದು, ಸದರಿ ಕ್ರಯ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಖಾತಾ ನಕಲನ್ನು ಹಾಗೂ ಕಂದಾಯ ರಶೀದಿಗಳನ್ನು ಸಹ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ಮನೆಯನ್ನು ನಿರ್ಮಿಸುವಾಗ ಪರವಾನಿಗೆ ಪಡೆದಿರುತ್ತೇನೆ. ಸದರಿ ಪರವಾನಿಗೆ ಮತ್ತು ನಕ್ಷೆಯನ್ನು ನಾನು

ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಊರಿನವರ ಮೇಲೆ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳ ಸುಮಾರು ಮೂರು ಕೇಸುಗಳನ್ನು ಹಾಕಿರುತ್ತೇನೆ. ಆರೋಪಿತರ ವಿರುದ್ಧ ನಾನು ಯಾವುದೇ ಸಿವಿಲ್ ದಾವೆಗಳನ್ನು ದಾಖಲಿಸಿರುವುದಿಲ್ಲ. ನನ್ನ ಪಿರ್ಯಾದಿನಲ್ಲಿ ಅಸಲು ದಾವಾ ಸಂಖ್ಯೆ 407/2015 ನ್ನು ಹಾಕಿರುವುದಾಗಿ ತಿಳಿಸಿದ್ದು, ಸದರಿ ದಾವೆಯನ್ನು ಜಿಗಣೆಹಳ್ಳಿಯ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರುಗಳು ಹಾಗೂ ಒಬ್ಬ ಗಾರೆ ಕೆಲಸದವರ ಮೇಲೆ ಹಾಗೂ ಗ್ರಂಥಾಲಯದ ನಿರೀಕ್ಷಕರ ಮೇಲೆ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಗ್ರಂಥಾಲಯದ ನಿರೀಕ್ಷಕರು ನಮ್ಮ ಊರಿನ ಮುಖ್ಯಸ್ಥರಾಗಿರುತ್ತಾರೆ. ಸದರಿಯವರನ್ನು ನಾನು 08 ನೇ ಪ್ರತಿವಾದಿಯನ್ನಾಗಿ ಈ ದಾವೆಯಲ್ಲಿ ಸೇರಿಸಿರುತ್ತೇನೆ ಎಂದರೆ ಸರಿ.

ಅಸಲು ದಾವಾ ಸಂಖ್ಯೆ 407/2015 ರ ದಾವೆಯಲ್ಲಿ ಚಕ್ಕುಬಂದಿ ಪೂರ್ವಕ್ಕೆ-ಪೂಜಾರಿ ಸಿದ್ದಣ್ಣ, ಪಶ್ಚಿಮಕ್ಕೆ-ಪೂಜಾರಿ ಚಿಕ್ಕಣ್ಣ, ದಕ್ಷಿಣಕ್ಕೆ-ಪೂಜಾರಿ ಮಲ್ಲಣ್ಣ, ಉತ್ತರಕ್ಕೆ-ಬಿಲ್ವಪತ್ರೆ ಕಟ್ಟೆ ಎಂದು ನಮೂದಿರುತ್ತೇನೆ ಎಂದರೆ ಸರಿ. ಸದರಿ ಚಕ್ಕುಬಂದಿಯ ಪ್ರಕರ ಯಾವ ಜಾಗಕ್ಕೂ ಹತ್ತು ಅಡಿ ಜಾಗವಿರುವುದಿಲ್ಲ ಎಂದರೆ ಸರಿ. ಈ ರೀತಿ ಹತ್ತು ಅಡಿ ಜಾಗವಿಲ್ಲದಿದ್ದರೂ ಸಹ ಪ್ರತಿವಾದಿಯವರ ವಿರುದ್ಧ ಹತ್ತು ಅಡಿ ಜಾಗ ಬಿಡಿಸಿಕೊಡಿ ಎಂದು ದಾವೆ ಹಾಕಿದ್ದೆ ಎಂದರೆ ಸರಿ. ಸದರಿ ದಾವೆಯು ಖರ್ಚು ಸಹಿತ ವಜಾಗೊಂಡಿರುತ್ತದೆ ಎಂದರೆ ಸರಿ. ಸದರಿ ತೀರ್ಪಿನ ವಿರುದ್ಧ ಕಡೂರಿನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಅಸಲು ದಾವಾ ಸಂಖ್ಯೆ 407/2015 ರಲ್ಲಿ ನಾನು ಪ್ರತಿವಾದಿಯವರ ವಿರುದ್ಧ ನಾನು ನಮ್ಮ ಮನೆಯನ್ನು ಸೇರಿಕೊಂಡು ಕಾಂಪೌಂಡ್ ಹಾಕುತ್ತಿದ್ದಾರೆ ಅದನ್ನು ನಿಲ್ಲಿಸಲು ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶ ಕೋರಿ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಪ್ರತಿವಾದಿಗಳು ಯಾರು ದೇವಸ್ಥಾನದ ಕಮಿಟಿಗೆ ಸೇರಿದವರಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪಂಚಾಯಿತಿ ಸದಸ್ಯರಾಗಿರುತ್ತಾರೆ ಎಂದು ನುಡಿದಿರುತ್ತಾರೆ.

ಸದರಿ ದಾವೆಯಲ್ಲಿ ದೇವಸ್ಥಾನದ ಕಮಿಟಿಯ ಸದಸ್ಯರುಗಳನ್ನು ಪಕ್ಷಗಾರರನ್ನಾಗಿ ಸೇರಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ದಿನಾಂಕ 09.11.2015 ರಿಂದ 19.12.2015 ರವರೆಗೂ ಏಕಪಕ್ಷಿಯ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶ ಜಾರಿಯಲ್ಲಿ ಇತ್ತು ಎಂದರೆ ಸರಿ. ಪ್ರತಿವಾದಿಗಳು ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಪರ ತಕರಾರನ್ನು ಸಲ್ಲಿಸಿದ ನಂತರ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶವನ್ನು ಮುಂದುರೆಸಲು ಕೋರಿ ಯಾವುದೇ ರೀತಿಯ ಅರ್ಜಿಯನ್ನು ನಾನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ನಂತರ ಪ್ರತಿವಾದಿಗಳ ವಿರುದ್ಧ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶ ಮುಂದುವರೆದಿರುವುದಿಲ್ಲ, ತೆರೆವುಗೊಂಡಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಏಕೆಂದರೆ ಕಾಂಪೌಂಡನ್ನು ಕಟ್ಟಿ ಪೂರ್ಣಗೊಳಿಸಿದ್ದರಿಂದ ನಾನು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ

ಎಂದು ನುಡಿಯುತ್ತಾರೆ. ಅಸಲು ದಾವಾ ಸಂಖ್ಯೆ 407/2015 ರಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ ನಂ.1 ನ್ನು ಸಿಪಿಸಿ ಕ್ರಮ ಆದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿದ್ದು ದಿನಾಂಕ 20.01.2016 ರಂದು ನಾನು ಮತ್ತು ನನ್ನ ವಕೀಲರು ನ್ಯಾಯಾಲಯದಲ್ಲಿ ಗೈರುಹಾಜರು ಇದ್ದುದ್ದರಿಂದ ಪ್ರತಿವಾದಿಗಳ ಪರ ವಾದವನ್ನು ಆಲಿಸಿ ಮುಂದಿನ ದಿನಾಂಕ 04.03.2016 ಕ್ಕೆ ದಾವೆಯನ್ನು ಮುಂದೂಡಲಾಗಿರುತ್ತದೆ ಎಂದರೆ ಸರಿ. ನಂತರ ಮಧ್ಯಂತರ ಅರ್ಜಿಯ ಮೇಲೆ ನ್ಯಾಯಾಲಯದಿಂದ ಯಾವುದೇ ಆದೇಶ ಆಗಿರುವುದಿಲ್ಲ ಎಂದರೆ ಸರಿ. ನಂತರ ನನ್ನ ವಕೀಲರು ದಿನಾಂಕ 04.04.2016 ರಂದು ಮಧ್ಯಂತರ ಅರ್ಜಿ ಸಂಖ್ಯೆ ನಂ.3 ನ್ನು ಸಿಪಿಸಿ ಕ್ರಮ ಆದೇಶ 39 ನಿಯಮ 2 ಎ ಅಡಿಯಲ್ಲಿ ಪ್ರತಿವಾದಿಗಳು ನ್ಯಾಯಾಲಯದ ಆದೇಶವನ್ನು ಉಲಂಘನೆ ಮಾಡಿರುತ್ತಾರೆ ಎಂದು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಅರ್ಜಿಗೆ ಪ್ರತಿವಾದಿಗಳು ತಕರಾರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ನಂತರ ದಿನಾಂಕ 15.12.2017 ರಂದು ಪ್ರತ್ಯೇಕವಾಗಿ ವಿಚಾರಣೆ ಮಾಡಲು ಸಿವಿಲ್ ಮಿಸ್. ಅನ್ನು ನೊಂದಣಿ ಮಾಡಲು ಕಛೇರಿಗೆ ಆದೇಶಿಸಿತ್ತು ಎಂದರೆ ಸರಿ. ಅದರಂತೆ ಸಿವಿಲ್ ಮಿಲ್ ನಂ.1/2018 ರಂತೆ ದಾವೆಯನ್ನು ದಾಖಲಿಸಿಕೊಂಡಿತ್ತು ಎಂದರೆ ಸರಿ. ನಂತರ ನಮಗೂ ಮತ್ತು ಪ್ರತಿವಾದಿಗಳಿಗೂ ನೋಟೀಸು ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ನಂತರ ನಾನು ನ್ಯಾಯಾಲಯಕ್ಕೆ ಹಾಜರಾಗದೇ ಇರುವುದರಿಂದ ಸಿ.ಮಿಲ್ 1/2018 ನ್ನು ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನಾನು ನನ್ನ ವಕೀಲರ ಮೂಲಕ ಸಿ.ಮಿಸ್.1/2016 ನ್ನು ಪ್ರತಿವಾದಿಯವರ ವಿರುದ್ಧ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆಯು ಪ್ರತಿವಾದಿಯರು ನ್ಯಾಯಾಲಯದ ಆದೇಶ ಉಲಂಘನೆ ಮಾಡಿರುವುದಿಲ್ಲ ಎಂದು ದಿನಾಂಕ 18.09.2024 ರಂದು 1 ನೇ ಹೆಚ್ಚುವರಿ ನ್ಯಾಯಾಲಯದಲ್ಲಿ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನನ್ನ ಪರ ವಿಚಾರಣೆ ಆಗಿ ನನ್ನನ್ನು ಸಹ ಪಾಟೀ ಸವಾಲು ಮಾಡಲಾಗಿತ್ತು ಎಂದರೆ ಸರಿ. ಅದೇ ರೀತಿ 8 ನೇ ಪ್ರತಿವಾದಿಯಾದ ಲಕ್ಷ್ಮಣರವರನ್ನು ಸಹ ವಿಚಾರಣೆಗೆ ಒಳಪಟ್ಟಿರುತ್ತಾರೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುತ್ತಾರೆ, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಹಿ/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು ಕಡೂರು.